


### ಉಪಯುಕ್ತ ಮಾಹಿತಿ

'ವಿಟಮಿನ್ ವ್ಯಾಮೋಹ', ಡಾ.ಬ್ರಹ್ಮಾನಂದ ನಾಯಕ ಅವರ ಮುಖಪುಟ ಲೇಖನ (ಸುಧಾ, ಸೆ. 10) ಬೋಧಪ್ರದ. ಕೆಲವು ವಿಟಮಿನ್‌ಗಳನ್ನು ಸೇವಿಸಿದರೂ ಕಷ್ಟ, ಬಿಟ್ಟರೂ ಕಷ್ಟ. ಇದು ಉಭಯ ಸಂಕಟ. ಲೇಖನ ಉಪಯುಕ್ತ ಮಾಹಿತಿ ನೀಡಿದೆ.

-ಸಿ.ಪಿ.ಕೆ. ಮೈಸೂರು, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಬಿ.ಎಸ್. ರಮೇಶ್, ಬೆಂಗಳೂರು, ಮಹಾವೀರ ಕಾಸರ, ಶಿವಮೊಗ್ಗ, ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ, ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ವೈದ್ಯರ ತಪ್ಪಲ್ಲ

ವೈದ್ಯರ ಬಳಿ ಬರುವ ಬಹಳಷ್ಟು ಜನ ತಮ್ಮ ರೋಗ ಲಕ್ಷಣಗಳನ್ನು ತಿಳಿಸುವ ಬದಲು ವಿಟಮಿನ್ ಮಾತ್ರೆ ಬರೆದುಕೊಡಿ, ಇಂಜೆಕ್ಷನ್ ಕೊಡಿ, ಗ್ಲುಕೋಸ್ ಹಾಕಿ ಎನ್ನುತ್ತಾರೆ. ಬರೆದುಕೊಡದಿದ್ದರೆ ವೈದ್ಯರನ್ನೇ ಬದಲಾಯಿಸಿ ಬಿಡುತ್ತಾರೆ. ಇದರಿಂದ ರೋಗಿಗೆ ಮತ್ತಷ್ಟು ತೊಂದರೆಯಾಗಬಹುದು. ಅಷ್ಟಕ್ಕೂ ಇದು ವೈದ್ಯರ ತಪ್ಪಲ್ಲ.

- ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಅರ್ಥಪೂರ್ಣ

ವಿಚಾರ ಲಹರಿಯಲ್ಲಿ 'ಕಾಪಾಡು ದೇವರೇ ಅಹಂಕಾರದಿಂದ' (ತೋಷ) ಬರಹ ಅರ್ಥಪೂರ್ಣವಾಗಿದೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಕೆ.ಎಂ. ಮಧ್ವರಾಯ, ಬೆಂಗಳೂರು

### ಮೆಡಿಕಲ್ ಟೂರಿಸಂ

'ನಿಮ್ಮೊಡನೆ'ಯಲ್ಲಿ 'ಮೆಡಿಕಲ್ ಟೂರಿಸಂ ಜನಪ್ರಿಯತೆ' (ಬಿ.ಎಂ. ಹನೀಫ್) ಭಾರತದಲ್ಲಿ ಮೆಡಿಕಲ್ ಟೂರಿಸಂ ಆಕರ್ಷಣೆ, ಚಿಕಿತ್ಸೆಯಲ್ಲಿ ಅಚ್ಚುಕಟ್ಟು, ತಜ್ಞ ವೈದ್ಯರ ಸೇವೆಗಳಿಂದ ಚಿಕಿತ್ಸಾ ಮಟ್ಟದಲ್ಲಿ ಸುಧಾರಣೆ ಸಾಧ್ಯ. ಆದರೆ ಲೇಖಕರು ಬೊಟ್ಟುಮಾಡಿದ ಸೌಜನ್ಯರಹಿತ ವರ್ತನೆ, ನಾಗರಿಕ ಪ್ರಜ್ಞೆಯ ಕೊರತೆ, ಸ್ವಚ್ಛತೆಯ ಕೊರತೆ ಬಗ್ಗೆ ಗಮನ ಹರಿಸಬೇಕು.

- ಕೋಟೀಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ನೆನಪು ಮರುಕಳಿಸಿತು

'ದಿಲ್ ಹೂಂ ಹೂಂ ಕರೆ ಘಬರಾಯೆ' (ಅಂಜಲಿ ರಾಮಣ್ಣ) ಲೇಖನ ಭೂಪೇನ್ ಹಜಾರಿಕ ಅವರ ನೆನಪನ್ನು ಮರುಕಳಿಸುವಂತೆ ಮಾಡಿದೆ. ಇವರ ಕೆಲವು ಹಾಡುಗಳನ್ನು ಇಂದಿಗೂ ಮುಂಬಯಿ ವಿವಿಧ ಭಾರತಿಯಲ್ಲಿ ಕೇಳಬಹುದು.

- ರಮೇಶ್, ಬೆಂಗಳೂರು, ಕೊ.ಸು. ನರಸಿಂಹಮೂರ್ತಿ, ಮೈಸೂರು

### ಪ್ರವಾಸ ಲೇಖನ

'ಈಜಿಪ್ಟಿನ ವಾಸ್ತು ವಿನ್ಯಾಸ' ಪ್ರವಾಸ ಲೇಖನ (ಎಸ್.ಆರ್. ದೇವಪ್ರಕಾಶ್) ಸೊಗಸಾಗಿದೆ. ಇಲ್ಲಿನ ಪ್ರಾಚೀನ ರಮ್ಯತೆ ಬಗೆಗಿನ ಮಾಹಿತಿ ಓದುಗರನ್ನು ಸೆಳೆಯಿತು.

-ಎಚ್.ಆನಂದಕುಮಾರ್, ಚಿತ್ರದುರ್ಗ

### ಕಥೆ ಚೆನ್ನಾಗಿದೆ

ಹಂಝು ಮಲಾರ್ ಅವರ ಕಥೆ 'ರಣಕಹಳೆ' ಚೆನ್ನಾಗಿದೆ.

-ಕೊಹಿಮ, ಬಸರಕೋಡು

### ಪದಬಂಧ

ಪದಬಂಧದಲ್ಲಿ ಮೇಲಿನಿಂದ ಕೆಳಕ್ಕೆ 'ಅಂಧರ ಬಗ್ಗೆ ಸಲ್ಲದು ಗೌರವ'.. ಇದಕ್ಕೆ ನಾಲ್ಕು ಅಕ್ಷರ ಕೊಟ್ಟಿದ್ದಾರೆ. ಆದರೆ ಮೂರು ಚೌಕ ಮಾತ್ರ ಬಿಡಲಾಗಿದೆ.

-ಎಲ್. ಸ್ವರ್ಣಲತಾ, ಮೈಸೂರು

